ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು

ಸಾಕ್ಷಿಯ ಹೆಸರು :- ಚೇತನ್

ತಂದೆ/ಗಂಡನ ಹೆಸರು :- ರಾಜು

ವಯಸ್ಸು :- 28 ವರ್ಷ

ಉದ್ಯೋಗ :- ವ್ಯಾಪಾರ

ವಾಸಸ್ಥಳ :- ಮೈಸೂರು

(ಸಾಕ್ಷಿಗೆ ದಿನಾಂಕಃ 24-11-2025 ರಂದು ಪ್ರಮಾಣ ವಚನ ಬೋಧಿಸಲಾಯಿತು)

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಸಾಕ್ಷಿಯು ಒಂದು ದಾಖಲೆಯಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಸದರಿ ಅಮಾನತ್ತು ಮಹಜರ್ ಆಗಿದ್ದು, ಅದನ್ನು ನಿಪಿ–5 ಎಂದು, ಸದರಿ ನಿಪಿ–5 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–5 ಎ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಮೈಸೂರಿನಲ್ಲಿ ಮೈಸೂರಿನ ರೈಲ್ವೆ ಪೋಲೀಸ್ ಠಾಣೆಯಲ್ಲಿ ಮಧ್ಯಾಹ್ನದ ವೇಳೆಯಲ್ಲಿ ಮಾಡಿರುತ್ತೇನೆ. ನಿಪಿ–5 ರಲ್ಲಿ ಪೊಲೀಸರು ಏನು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ. ನನ್ನನ್ನು ಹೊರತುಪಡಿಸಿ ಸದರಿ ನಿಪಿ–5 ಮಹಜರ್ ಗೆ ಬೇರೆ ಯಾರು ಸಹಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಸ್ವತ್ತನ್ನು ಅಮಾನತ್ತುಪಡಿಸಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ. ಈಗ ನೋಡುತ್ತಿರುವ ಆರೋಪಿಯನ್ನು ನಾನು ಈ ಹಿಂದೆ ನೋಡಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ–**

ದಿ 22–03–2015 ರಂದು ಸುಮಾರು ಬೆಳಗ್ಗೆ 11.00 ಗಂಟೆ ಸಮಯದಲ್ಲಿ ರೈಲ್ವೆ ಪೋಲೀಸ್ ಠಾಣೆಯಲ್ಲಿ ಆರೋಪಿ 2 ರವರು ಸೀಲ್ ನ್ನು ಹಾಜರುಪಡಿಸಿದ್ದು, ಸದರಿ ವೇಳೆಯಲ್ಲಿ ಚಾಸಾ–14 ರವರು ಅಮಾನತ್ತುಪಡಿಸಿಕೊಂಡು ನಿಪಿ–5 ರಂತೆ ನಿಮ್ಮ ಮತ್ತು ಚಾಸಾ–7 ರವರ ಸಮಕ್ಷಮ ಅಮಾನತ್ತು ಮಹಜರ್ ಜರುಗಿಸಿ, ನಿಮಗೆ ಓದಿ ಹೇಳಿ ನಿಮ್ಮ ಸಹಿ ಪಡೆದಿರುತ್ತಾರೆಂದರೆ ಸರಿಯಲ್ಲ. ಸದರಿ ವೇಳೆಯಲ್ಲಿ ಮೇಲೆ ಹೇಳಿದ ಸೀಲ್ ನ್ನು ಅಮಾನತ್ತುಪಡಿಸಿಕೊಳ್ಳಲಾಗಿತ್ತು ಎಂದರೆ ಸರಿಯಲ್ಲ.

ದಿ 22-03-2015 ರಂದು ನೀವು ರೈಲ್ವೆ ಪೋಲೀಸ್ ಠಾಣೆಗೆ ಹಾಜರಾಗಿ ''ದಿ 22-03-2015 ರಂದು.................. ಗುರುತಿಸುತ್ತೇನೆ.'' ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ನಿರಾಕರಣೆಯ ಭಾಗವನ್ನು ಸಂಪೂರ್ಣವಾಗಿ ಸಾಕ್ಷಿಗೆ ಓದಿ ಹೇಳಿದ್ದು ನಿರಾಕರಿಸಿದ ಮೇರೆಗೆ ಸದರಿ ಹೇಳಿಕೆಯ ಭಾಗವನ್ನು ನಿಪಿ-6 ಎಂದು ಗುರುತಿಸಲಾಯಿತು.

ನಿಪಿ-5, 6 ರಲ್ಲಿರುವ ಎಲ್ಲಾ ವಿಚಾರ ನನಗೆ ಗೊತ್ತಿದ್ದರೂ ಕೂಡ ಆರೋಪಿತರಿಗೆ ಸಹಾಯವಾಗಲಿ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಮಾನ್ಯ ಶ್ರೀ. ವಕೀಲರಿಂದಃ–**

ಏನು ಇಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸ ಇ ಒ**

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು